# ಗಣಿತ

## ಭಾಗ - 1

## MATHEMATICS

## Part - I

## ತರಗತಿ - 1

ಕೇರಳ ಸರಕಾರ
ಶಿಕ್ಷಣ ಇಲಾಖೆ
2015

ತಯಾರಿಸಿದವರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT), ಕೇರಳ
2015

JT 327-1/Maths 1(K)

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠಾ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವ ಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ನನ್ನ ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

*Prepared by*
State Council of Educational Research and Training (SCERT)
Poojappura, Thiruvananthapuram - 695 012, Kerala.
*Website* www.scert.kerala.gov.in *e-mail* scertkerala@gmail.com

*Typeset and design by* SCERT Computer Lab

© Government of Kerala • Department of Education • 2014

ಒಲವಿನ ಗೆಳೆಯರೇ

ಗಣಿತ ಪಾಠವನ್ನು ರಸವತ್ತಾಗಿಸುವ ಉದ್ದೇಶವಿರಿಸಿಕೊಂಡು ಈ ಪುಸ್ತಕವನ್ನು ತಯಾರಿಸಲಾಗಿದೆ.

ಈ ಪುಸ್ತಕದಲ್ಲಿರುವ ಹೆಚ್ಚಿನ ಚಟುವಟಿಕೆಗಳು ಅಧ್ಯಾಪಕರ ಸಹಾಯದೊಂದಿಗೆ ನಡೆಸಬೇಕಾಗಿದೆ.

ಪರಿಸರದಿಂದ ಮತ್ತು ಅನುಭವಗಳಿಂದ ಗಳಿಸಬೇಕಾದ ಪ್ರಾಥಮಿಕ ಗಣಿತದ ಆಶಯಗಳನ್ನು ಈ ಪುಸ್ತಕದಲ್ಲಿ ಅಳವಡಿಸಲಾಗಿದೆ.

ಆಟಗಳ ಮೂಲಕ, ನಿರೀಕ್ಷಣೆಯ ಮೂಲಕ ಮತ್ತು ಪ್ರಾಯೋಗಿಕವಾಗಿಯೂ ಅವುಗಳನ್ನು ಗಳಿಸಲು ಶ್ರಮಿಸುವ.

ಪ್ರೀತಿಪೂರ್ವಕ

**ಡಾ. ಎಸ್. ರವೀಂದ್ರನ್ ನಾಯರ್**

ನಿರ್ದೇಶಕರು

ಎಸ್.ಸಿ.ಇ.ಆರ್.ಟಿ.

## TEXTBOOK DEVELOPMENT TEAM

### PARTICIPANTS

**Ajeesh Kumar T.B.**
*H.S.A., GHS Mannamkandam, Idukki*
**Carmaly P.A.**
*LPSA, H.F A.S.B.S. Kumbla*
**P.P. Prabhakaran Nair**
*HSA (Rtd.) Palora High School, Kozhikode*
**Bareesh V.P.**
*A.M.L.P.S. Farook, Kozhikode*
**Manoj T.N.**
*H.S.A. G.M.H.S. Palakuzha, Ernakulam*
**K.R. Muralidharan Pillai**
*Senior Lecturer DIET Kollam*
**Muhammad Abdulla K.M.**
*Govt. Boys H.S.S. Manjeri, Malapuram*
**Sasidharan V.P.**
*P.D. Teacher, G.H.S.S. Ravaneshwaram, Kasaragod*
**Sreekumar C.G.**
*P.D. Teacher, Govt. Co-operative LPS Irumpanangad, Kollam*
**C.V. Sajeevan**
*Kariyil, ALPS Thurthi, Kasaragod*
**Habeeb Rahman**
*H.S.A. G.H.S. Irumbuzhi, Malapuram*

### EXPERTS

**Venugopal C.**
*Asst. Professor, Govt. College of Teacher Education, Thiruvananthapuram*
**Dr. Sunny Lukose**
*Deputy Director of Collegiate Education (Rtd.) Ernakulam*

### ARTISTS

**Azeez K.S.**
*DEO Office, Muvattupuzha*
**Kunhiraman P.C.**
*DIET, Ernakulam*
**Jijeesh P.B.**
*RDTE, Kothamangalam*
**Rakesh**
*Neyyardam, Thiruvanthapuram*
**Harikumar K.B.**
*Kazhakootam, Thiruvanthapuram*
**Hari Charutha**
*Nemam, Thiruvanthapuram*

## Academic Co-Ordinator

**Dr. Lidson Raj**
*Research Officer, SCERT*

## KANNADA VERSION

### PARTICIPANTS

**Radhakrishna M.**
*G.V.H.S.S. Mulleria*
**Ravishankar K.**
*G.S.B.S. Peral*
**Shriharsha M.P.**
*G.W.L.P.S. Kasaragod*
**Srikumary K.**
*A.U.P.S. Anekal*

### LANGUAGE EXPERT

**Dr. Radhakrishna Bellur**
*Asst. Prof., Govt. College, Kasaragod*


### ARTIST

**Madhusoodhanan K.V.**
G.H.S.S. South Thrikkaripur

### Co-ordinator

**Arun Jyothi. S.** Research Officer, SCERT

State Council Of Educational Research and Training (SCERT)
Vidya Bhavan, Poojappura, Thiruvananthapuram - 695012





# ಅನುಕ್ರಮಣಿಕೆ


1. ಅರುಣನ ಮನೆ........................................ 6

2. ಅಂಜಲಿಯ ಗೆಳೆಯರು.............................. 16

3. ಮನುವಿನ ಕನಸು ...................................... 28

4. ಓಣಂ ಬಂತು ಓಡಿ ಬನ್ನಿ.......................... 35

5. ಹತ್ತು ಒಂದು ಹನ್ನೊಂದು....................... 59





# 1 ಅರುಣನ ಮನೆ








ಚಿತ್ರದಲ್ಲಿ ಏನೇನು ಇವೆ?


ಅರುಣನ ಹುಟ್ಟುಹಬ್ಬಕ್ಕೆ ಅವನ ಗೆಳೆಯರು ಬಂದರು.






| | | |
|---|---|---|
| ದೊಡ್ಡದು ಯಾವುದು ✓ ಹಾಕಿರಿ. |  |  |






| | | |
|---|---|---|
| ಒಳಗೆ ಯಾರು? ✓ ಹಾಕಿರಿ. |  |  |




| | | |
|---|---|---|
| ಕೆಳಗೆ ಇರುವವುಗಳಿಗೆ ✓ ಹಾಕಿರಿ. |  |  |





| | | |
|---|---|---|
| ಎತ್ತರ ಕಡಿಮೆ ಇರುವ ಮರಕ್ಕೆ ✓ ಹಾಕಿರಿ. |  |  |





| | | |
|---|---|---|
| ಕಡಿಮೆ ಯಾವುದರಲ್ಲಿ? ✓ ಹಾಕಿರಿ. |  |  |

## ಯಾರು ಮುಂದೆ ? ಯಾರು ಹಿಂದೆ?

ಮುಂದೆ ಅರುಣ. ಅವನ ಹಿಂದೆ ಅನು.
ಇಬ್ಬರೂ ಕೆರೆಯ ಕಡೆಗೆ ನಡೆದರು.





| | | |
|---|---|---|
| ಅನುವಿನ ಎಡಭಾಗದಲ್ಲಿ ಇರುವುದು ಯಾವುದು? ✓ ಹಾಕಿರಿ. |  |  |




| | | |
|---|---|---|
| ಹತ್ತಿರದಲ್ಲಿ ಇರುವುದು ಯಾವುದು? ✓ ಹಾಕಿರಿ. |  |  |


ಅವರು ಅಡುಗೆ ಕೋಣೆಗೆ ಹೋದರು. ಅರುಣನ ತಾಯಿ ಅವರಿಗೆ ತಿಂಡಿ ಕೊಟ್ಟರು.




ಹೆಚ್ಚು ತಿಂಡಿ ಯಾರಿಗೆ?
✓ ಹಾಕಿರಿ.








ಚಿಕ್ಕ ಬೊಂಬೆಗೆ ಬಣ್ಣ ಹಚ್ಚಿರಿ.




ಮೇಜಿನ ಮೇಲೆ ಇರುವ ಬೊಂಬೆಗೆ ಬಣ್ಣ ಹಚ್ಚಿರಿ.



ಅರುಣನ ಮುಂದೆ ಇರುವ ಗಿಳಿಗೆ ಬಣ್ಣ ಹಚ್ಚಿರಿ.

ಚಿಕ್ಕದು ಯಾವುದು?

ಉರುಟು ಹಾಕಿರಿ.



ದೂರದಲ್ಲಿ ಇರುವ ಮರ ಯಾವುದು?

ಉರುಟು ಹಾಕಿರಿ.



ಒಳಗೆ ಯಾರು? ಹೊರಗೆ ಯಾರು?

ಹೊರಗೆ ಇರುವವರಿಗೆ ಬಣ್ಣ ಹಚ್ಚಿರಿ.






# 2 ಅಂಜಲಿಯ ಗೆಳೆಯರು




ಎಷ್ಟೆಷ್ಟು ಗುಂಪುಗಳು....!




ಎರಡು ಗುಬ್ಬಚ್ಚಿಗಳು ಗೂಡು ಕಟ್ಟಿದುವು.
ಒಂದು ಒಳ್ಳೆಯ ಗೂಡು. ಚಂದವಾದ ಗೂಡು
ಗುಬ್ಬಚ್ಚಿ ಮೊಟ್ಟೆ ಇಟ್ಟಿತು. ಒಂದು, ಎರಡು, ಮೂರು. ಮೂರು ಮೊಟ್ಟೆಗಳು.
ಮೂರು ಮೊಟ್ಟೆಗಳು ಬಿರಿದುವು. ಮೂರು ಗುಬ್ಬಚ್ಚಿ ಮರಿಗಳು.
ಅಮ್ಮ ಬಂದಳು
ಹಾಯ್.... ನಾಲ್ಕು ಭತ್ತದ ತೆನೆಗಳು.



ಅಮ್ಮಾ... ಕೆಳಗೆ ನೋಡು.
ಐದು ಮಂದಿ ಇದ್ದಾರೆ.
ನನಗೆ ಎರಡು ಗುಬ್ಬಚ್ಚಿ ಮರಿಗಳು ಬೇಕು.
ಅಮ್ಮಾ... ಹೆದರಿಕೆಯಾಗುತ್ತಿದೆ.
ಆದಿತ್ಯ... ಒಂದು ನನಗೆ
ನಿನ್ನನ್ನು ನಾನು....
ಅಯ್ಯೋ...
ಧುಡುಂ...!!
ಅಬ್ಬ.... ಬಚಾವಾದೆ






## ಹಾಡುವ

ಆನೆಗೆ ಸೊಂಡಿಲು ಎಷ್ಟು?
ಒಂದು ಒಂದೇ ಒಂದು


ಆಡಿಗೆ ಕೋಡುಗಳೆಷ್ಟು?
ಎರಡು ಎರಡೇ ಎರಡು


ರಿಕ್ಷಕೆ ಚಕ್ರಗಳೆಷ್ಟು?
ಮೂರು ಮೂರೇ ಮೂರು




ದನಕ್ಕೆ ಕಾಲುಗಳೆಷ್ಟು?
ನಾಲ್ಕು ನಾಲ್ಕೇ ನಾಲ್ಕು

ಕೈಗೆ ಬೆರಳುಗಳೆಷ್ಟು?
ಐದು ಐದೇ ಐದು





# ತೋಡಿನ ಬದಿಯಲ್ಲಿ




ಸಮಾನ ಸಂಖ್ಯೆಯ ಹೂಗಳಿರುವ ಗಿಡಗಳನ್ನು ಗೆರೆ ಎಳೆದು ಜೋಡಿಸಿರಿ.

ಅವುಗಳಿಗೆ ಒಂದೇ ಬಣ್ಣ ಹಚ್ಚಿರಿ.

## ಹೂದೋಟದ ಗೆಳೆಯರು


**ಸಂಖ್ಯೆಗೆ ಅನುಸಾರವಾಗಿ ಬೊಟ್ಟು ಹಾಕಿರಿ.**




## ಆನೆಯ ದಾರಿ....



**ಒಂದು** ಆನೆಯು
ಜತೆಗೆ ಅಂಜಲಿ
ಹೊಳೆಯ ಹಾದಿಯ ಹಿಡಿದಳು



ದಾರಿ ಬದಿಯಲಿ
ಮರದ ಗೆಲ್ಲಲಿ
**ಎರಡು** ಗಿಳಿಗಳ ಕಂಡಳು



ಮುದುಡಿ ಕುಳಿತವು
ಪೊದರಿನೊಳಗಡೆ
**ಮೂರು** ಅಳಿಲಿನ ಮರಿಗಳು




ಹೆದರಿ ನೀರಿಗೆ
ಹಾರಿ ಬಿದ್ದುವು
**ನಾಲ್ಕು** ಕಪ್ಪೆಯ ಮರಿಗಳು




**ಐದು** ಹೂಗಳು
ಇರುವ ನದಿಯಲಿ
ಆನೆ ಇಳಿಯಿತು ಸ್ನಾನಕೆ




ಭಯದಿ ಮೀನಿನ
ಮರಿಗಳೆಲ್ಲವು
ಓಡಿ ಹೋದುವು ದೂರಕೆ




# ಮಾವಿನ ಮರದ ಗೆಳೆಯರು




ನಾವು ನಾಲ್ಕು ಮಂದಿ.
ನಮಗೆ ಹಣ್ಣುಗಳು 4.



ನಾನೊಬ್ಬ.
ನನಗೆ ಹಣ್ಣು 1



ನಾವು ಮೂರು ಮಂದಿ.
ನಮಗೆ ಹಣ್ಣುಗಳು 3.




ನಾವಿಬ್ಬರು.
ನಮಗೆ ಹಣ್ಣುಗಳು 2




ನಾವು ಐದು ಮಂದಿ
ನಮಗೆ ಹಣ್ಣುಗಳು 5.

## ಅಳಿಲುಗಳು ಎಷ್ಟು?


**ಸಂಖ್ಯೆಯೊಂದಿಗೆ ಅಳಿಲುಗಳನ್ನು ಗೆರೆ ಎಳೆದು ಜೋಡಿಸಿರಿ.**




1



2



3




4



5

## ಯಾವುದು ಎಷ್ಟು? ಚಿತ್ರ ನೋಡಿ ಸಂಖ್ಯೆ ಬರೆಯಿರಿ.




JT 327-3/Maths 1(K)

# ಸ್ಲೇಟಿನಲ್ಲಿ ಬರೆದಿರುವ ವಸ್ತುಗಳನ್ನು ಎಣಿಸಿರಿ.


**ಸ್ಲೇಟಿನಲ್ಲಿ ಬರೆದಿರುವ ಸಂಖ್ಯೆಗಳಷ್ಟು ವಸ್ತುಗಳು ಕಪಾಟಿನಲ್ಲಿ ಇವೆಯೇ? ಕಡಿಮೆ ಇರುವ ವಸ್ತುಗಳಿಗೆ ಆದಿತ್ಯನ ಸ್ಲೇಟಿನಲ್ಲಿ 'X' ಗುರುತು ಹಾಕಿರಿ.**






**ಕಪಾಟಿನಲ್ಲಿರುವ ವಸ್ತುಗಳು ಎಷ್ಟು?**


| | | | |
|---|---|---|---|
| **ಸೌಟು** | | **ತಟ್ಟೆ** | |
| **ಗ್ಲಾಸು** | | **ಬುತ್ತಿ** | |
| **ಮಡಕೆ** | | | |

## ಎಣಿಸಿ ಬರೆಯುವ











# 3 ಮನುವಿನ ಕನಸು




ಐದು ಮಂದಿ ಬೇಟೆಗಾರರು
ಆರು ಬಲೆಗಳು
ಏಳು ಕರಡಿಗಳು
ಎಂಟು ಕರಡಿಗಳು ಅಲ್ಲವೇ? ಅಲ್ಲ ಒಂಭತ್ತು....

## ಕರಡಿ ಮತ್ತು ಮರಿಗಳು

**ಒಂದು** ಕಾಡಿನ ಮಧ್ಯದೊಳಗೆ

**ಎರಡು** ಮರಗಳ ನಡುವೆ ಮಲಗಿ

**ಮೂರು** ಕರಡಿಗಳಾಡುತಿದ್ದುವು

**ನಾಲ್ಕು** ಮರಿಗಳ ಸೇರಿಸಿ

**ಐದು** ಜನರು ಬೇಟೆಗಾರರು

**ಆರು** ಬಲೆಗಳ ಹಿಡಿದುಕೊಂಡು

**ಏಳು** ಕರಡಿಗಳನ್ನು ಹಿಡಿದರು


**ಎಂಟು** ಎಂದರು ಕೆಲವರು

**ಒಂಬತ್ತು** ಎಂದನು ಅವರಲೊಬ್ಬನು

ಎಣಿಸಿ ನೋಡಲು ಏಳೇ ಏಳು

ಇಲ್ಲಿಗೀಕಥೆ ಮುಗಿಯಿತು





ಬಿಟ್ಟುಹೋದ ಸಂಖ್ಯೆಗಳನ್ನು ಹೂಗಳ ಮೇಲೆ ಬರೆಯಿರಿ.



# ಎಣಿಸುವ ಬರೆಯುವ





















## ಅಡಗಿರುವ ಸಂಖ್ಯೆಗಳು




ಬಸ್ಸು ನಿಂತಿರುವುದರಿಂದ ಎರಡು ಹೂಗಿಡಗಳು ಕಾಣಿಸುವುದಿಲ್ಲ.
ಅವುಗಳಲ್ಲಿರುವ ಸಂಖ್ಯೆಗಳು ಯಾವುವು?

## ಅಡಗಿರುವುದೇನು?

1ರಿಂದ 9ರ ವರೆಗಿನ ಚುಕ್ಕೆಗಳನ್ನು ಜೋಡಿಸಿ ನೋಡಿರಿ.




# ಸಂಖ್ಯೆ ಬರೆಯುವ




ಚಿತ್ರ ನೋಡಿ ಸಂಖ್ಯೆ ಬರೆಯಿರಿ.

ಕೆಳಗೆ ಕೊಟ್ಟಿರುವ ಪ್ರತಿಯೊಂದು ಎಷ್ಟೆಷ್ಟು ಇವೆ ಎಂದು ಚಿತ್ರ ನೋಡಿ ಬರೆಯಿರಿ.




ಇವುಗಳಲ್ಲಿ ದೊಡ್ಡ ಸಂಖ್ಯೆ ಯಾವುದು?


ಸಣ್ಣ ಸಂಖ್ಯೆ ಯಾವುದು?

# 4 ಓಣಂ ಬಂತು ಓಡಿ ಬನ್ನಿ

ಓಣಂ ಹಬ್ಬ ಬಂತು
ಉಷ ಮತ್ತು ಆಯಿಷ ಹೂಗಳನ್ನು ಕೊಯ್ಯಲು ಹೋದರು.



ಮರದ ಕೊಂಬೆಯಲ್ಲಿ ಕುಳಿತಿರುವ ಗಿಳಿಗಳನ್ನು ಕಂಡರು.



ಮೇಲಿನ ಕೊಂಬೆಯಲ್ಲಿರುವ ಗಿಳಿಗಳು

ಕೆಳಗಿನ ಕೊಂಬೆಯಲ್ಲಿರುವ ಗಿಳಿಗಳು

ಉಷ ಮತ್ತು ಆಯಿಷ ಸದ್ದು ಮಾಡದೆ ಮರದ ಬಳಿಗೆ ಬಂದರು.




ಇಬ್ಬರೂ ಚಪ್ಪಾಳೆ ತಟ್ಟಿದರು.
ಗಿಳಿಗಳು ಹಾರಿಹೋದುವು.

ಹಾರಿಹೋದ ಗಿಳಿಗಳು




ಗಿಳಿಗಳು ಹಾರಿಹೋಗಿ ಇನ್ನೊಂದು ಮರದ ಕೊಂಬೆಯ ಮೇಲೆ ಕುಳಿತವು.
ಅವು ಒಂದು ಗುಂಪು ಆದವು.



| | |
|---|---|
| ಕೊಂಬೆಯಲ್ಲಿರುವ ದೊಡ್ಡ ಗಿಳಿಗಳು | |
| ಸಣ್ಣ ಗಿಳಿಗಳು | |
| ಒಟ್ಟು ಗಿಳಿಗಳು | |

ಹೂವಿನ ಬುಟ್ಟಿಯೊಂದಿಗೆ ಮಕ್ಕಳು ಮನೆಗೆ ತಲುಪಿದರು.





ಉಷಳಿಗೆ ಸಿಕ್ಕಿದ ಹೂಗಳು

ಗುಲಾಬಿ ☐ ದಾಸವಾಳ ☐ ಸೇವಂತಿಗೆ ☐

ಆಯಿಷಳಿಗೆ ಸಿಕ್ಕಿದ ಹೂಗಳು

ಗುಲಾಬಿ ☐ ದಾಸವಾಳ ☐ ಸೇವಂತಿಗೆ ☐




ಇಬ್ಬರಿಗೂ ಸಿಕ್ಕಿದ ಹೂಗಳನ್ನು ಒಟ್ಟು ಮಾಡಿದರು
ಪ್ರತಿಯೊಂದು ಹೂಗಳು ಎಷ್ಟೆಷ್ಟು?

| | ಆಯಿಷ | ಉಷ | ಒಟ್ಟು |
|---|---|---|---|
| ಗುಲಾಬಿ | | | |
| ದಾಸವಾಳ | | | |
| ಸೇವಂತಿಗೆ | | | |

ಅತಿ ಹೆಚ್ಚು ಇರುವ ಹೂಗಳಿಗೆ ✓ ಗುರುತು ಹಾಕಿರಿ



ಅತಿ ಕಡಿಮೆ ಇರುವ ಹೂಗಳಿಗೆ ✓ ಗುರುತು ಹಾಕಿರಿ






## ಹತ್ತು ಹೂಗಳು

ಒಂದು ಒಂದು ಎರಡು
ಚೆಂಡು ಹೂಗಳು ಎರಡು
ಎರಡು ಒಂದು ಮೂರು
ತಾವರೆ ಹೂಗಳು ಮೂರು
ಮೂರು ಒಂದು ನಾಲ್ಕು
ಮಲ್ಲಿಗೆ ಹೂಗಳು ನಾಲ್ಕು
ನಾಲ್ಕು ಒಂದು ಐದು
ನೈದಿಲೆ ಹೂಗಳು ಐದು
ಐದು ಒಂದು ಆರು
ಕೇದಗೆ ಹೂಗಳು ಆರು






ಆರು ಒಂದು ಏಳು
ಸಂಪಿಗೆ ಹೂಗಳು ಏಳು
ಏಳು ಒಂದು ಎಂಟು
ಗುಲಾಬಿ ಹೂಗಳು ಎಂಟು
ಎಂಟು ಒಂದು ಒಂಭತ್ತು
ತುಂಬೆ ಹೂಗಳು ಒಂಭತ್ತು
ಒಂಭತ್ತು ಒಂದು ಹತ್ತು
ಕೇಪುಳ ಹೂಗಳು ಹತ್ತು




## ಬಣ್ಣ ಹಚ್ಚುವ



## ಗೆಳೆಯರು ಒಂದುಗೂಡಿದಾಗ




ಉಷ ಮತ್ತು ಗೆಳೆಯರು ಆಟವಾಡಲು ಒಟ್ಟು ಸೇರಿದರು



ಚಿತ್ರದಲ್ಲಿ ಎಷ್ಟು ಮಂದಿ ಗೆಳೆಯರು ಇದ್ದಾರೆ? [ ]

## ಗೆರೆ ಎಳೆದು ಜೋಡಿಸುವ

**ಯಾವ ಯಾವ ಗುಂಪುಗಳನ್ನು ಒಟ್ಟು ಸೇರಿಸಿದಾಗ 6 ಸಿಗುವುದು?**
**ಗೆರೆ ಎಳೆದು ಜೋಡಿಸಿರಿ.**



**ಗೆರೆ ಎಳೆದು ಜೋಡಿಸಿದ ಮಂಜಟ್ಟಿ ಕಾಯಿಗಳು ಸೇರಿದಾಗ ಎಷ್ಟು ಸಿಕ್ಕಿತು?**

3 + 3 = ☐

☐ + ☐ = ☐

☐ + ☐ = ☐

## ಹಲವು ಗುಂಪುಗಳು

**ಮಂಜಟ್ಟಿ ಕಾಯಿಗಳನ್ನು ಎರಡು ಗುಂಪುಗಳನ್ನಾಗಿ ಮಾಡಿರಿ.**
**ಸಂಖ್ಯೆಗಳನ್ನು ಕೋಣೆಗಳಲ್ಲಿ ಬರೆಯಿರಿ.**



| | | | | |
|---|---|---|---|---|
| 3 | + | 4 | = | 7 |
| | + | | = | 7 |
| | + | | = | 7 |




| | | | | |
|---|---|---|---|---|
| | + | | = | 5 |
| | + | | = | 5 |



| | | | | |
|---|---|---|---|---|
| | + | | = | 9 |
| | + | | = | 9 |
| | + | | = | 9 |

## ಕೈಯಲ್ಲಿ ಎಷ್ಟು?

ತಟ್ಟೆಯಲ್ಲಿ 9 ಮಂಜಟ್ಟಿ ಕಾಯಿಗಳು ಇದ್ದವು. ಉಷ ಅವುಗಳಿಂದ ಕೆಲವು ಮಂಜಟ್ಟಿ ಕಾಯಿಗಳನ್ನು ತೆಗೆದಳು.





ತಟ್ಟೆಯಲ್ಲಿ ಉಳಿದ ಮಂಜಟ್ಟಿ ಕಾಯಿಗಳು ☐

ಉಷಳ ಕೈಯಲ್ಲಿರುವ ಮಂಜಟ್ಟಿ ಕಾಯಿಗಳು ☐

## ನಾವೂ ಆಡುವ

ಪ್ರತಿಯೊಂದು ಆಟದ ನಂತರ ಸಂಖ್ಯೆ ಬರೆಯುವ

| ತಟ್ಟೆಯಲ್ಲಿ ಉಳಿದದ್ದು | ತೆಗೆದದ್ದು |
|---|---|
| 5 | |
| 2 | |
| 1 | |
| | |
| | |
| | |
| | |

## ಅಡಗಿರುವವರು ಯಾರು?

ಕೊಟ್ಟಿರುವ ಸಂಖ್ಯೆಗಳನ್ನು ಕೂಡಿಸಿ ಕೋಣೆಯಲ್ಲಿ ಉತ್ತರ ಬರೆಯಿರಿ.

4 + 3 = 7

2 + 2 = ☐

5 + 1 = ☐

2 + 3 = ☐


3 + 1 = ☐

4 + 1 = ☐

2 + 4 = ☐


6 + 3 = ☐

ಉತ್ತರವಾಗಿ ಸಿಕ್ಕಿದ ಸಂಖ್ಯೆಗಳನ್ನು ಚಿತ್ರದಲ್ಲಿ ಗುರುತಿಸಿ ಬಣ್ಣ ಹಚ್ಚಿರಿ.




ಓಣಂ ಹಬ್ಬದ ಔತಣದ ಊಟವನ್ನು ಮಾಡಿ ಉಷ ಮತ್ತು ಆಯಿಷ ಸುತ್ತಾಡಲು ಹೊರಟರು.

## ಆಟದ ರೈಲು




5 ಮಂದಿ ಆಗಲು ಪ್ರತಿಯೊಂದರಲ್ಲಿ ಇನ್ನು ಎಷ್ಟು ಜನ ಕುಳಿತುಕೊಳ್ಳಬೇಕು?

# ದೋಣಿಯಲ್ಲಿ ಸಾಗುವ




ದೋಣಿಯಲ್ಲಿ ಎಷ್ಟು ಜನರು ಕುಳಿತುಕೊಳ್ಳಬಹುದು? ☐

ದೋಣಿಯಲ್ಲಿ ಈಗ ಕುಳಿತವರು ಎಷ್ಟು ಮಂದಿ? ☐

ಇನ್ನು ಎಷ್ಟು ಮಂದಿ ಕುಳಿತುಕೊಳ್ಳಬಹುದು? ☐


$9 - 4 = \square$

## ಸಂಖ್ಯಾ ದೋಣಿ

**ದಡದಲ್ಲಿ ಒಂದು ದೋಣಿ.**

**ದೋಣಿಯಲ್ಲಿ 'ಹುಟ್ಟು'ಗಳು ಇವೆ.**

**ಬಿಟ್ಟುಹೋದ ಸಂಖ್ಯೆಗಳನ್ನು 'ಹುಟ್ಟು'ಗಳ ಮೇಲೆ ಬರೆಯಿರಿ.**



# ಅಜ್ಜಿ ಮತ್ತು ಚಿನ್ನು ಚಿಕ್ಕು



ಅಜ್ಜಿ 5 ಹಪ್ಪಳಗಳನ್ನು ಹುರಿದರು.



ಹಪ್ಪಳಗಳನ್ನು ಹುರಿದು ಅಜ್ಜಿ ಹೊರಗೆ ಹೊರಟರು.



ಚಿನ್ನು ಬೆಕ್ಕಿನ ಮೂಗಿಗೆ ಹಪ್ಪಳದ ಪರಿಮಳ ಬಡಿಯಿತು.




ಚಿನ್ನು ಕಳ್ಳಹೆಜ್ಜೆ ಇಟ್ಟು
ಅಡುಗೆ ಮನೆಗೆ
ಹೋಯಿತು. ಯಾರೂ
ಇರಲಿಲ್ಲ. ಒಂದು
ಹಪ್ಪಳವನ್ನು ತಿಂದಿತು.
"ಹಾಯ್! ಬಹಳ
ರುಚಿ!"

ಚಿನ್ನು ಇನ್ನೊಂದು ಹಪ್ಪಳವನ್ನು ತೆಗೆದು ತಿನ್ನತೊಡಗಿತು.
ಅಷ್ಟರಲ್ಲಿ ಏನೋ ಸದ್ದು ಕೇಳಿತು.
ಚಿನ್ನು ಓಡಿ ಹೋಯಿತು.



ಅಜ್ಜಿ ಹಿಂತಿರುಗಿ ಬಂದು
ನೋಡಿದಾಗ......




ಅಜ್ಜಿ ಎಷ್ಟು ಹಪ್ಪಳಗಳನ್ನು ಹುರಿದರು?

ಚಿನ್ನು ಬೆಕ್ಕು ಎಷ್ಟು ಹಪ್ಪಳಗಳನ್ನು ತಿಂದಿತು?


ಉಳಿದ ಹಪ್ಪಳಗಳೆಷ್ಟು?

# ಉತ್ತರ ಬರೆಯುವ





8 - 3 = ☐






5 - 2 = ☐

| | | | | |
|---|---|---|---|---|
| 7 | - | 2 | = | ☐ |
| 5 | - | ☐ | = | 3 |
| 9 | - | ☐ | = | 8 |



# ಎಷ್ಟು ಉಳಿಯಿತು?

ಉಂಡಾಡಿ ಗುಂಡ
ಐದು ಲಾಡು ತಂದ

5

ಒಂದು ಲಾಡು ತಿಂದ
ಉಳಿಯಿತೆಷ್ಟು ಹೇಳಿ?



ಅವನ ತಮ್ಮ ಬಂದ
ಒಂದು ಲಾಡು ತಿಂದ
ಉಳಿಯಿತೆಷ್ಟು ಹೇಳಿ?




ಅಜ್ಜಿ ಅಲ್ಲಿ ಬಂದರು
ಒಂದು ಲಾಡು ತಿಂದರು
ಉಳಿಯಿತೆಷ್ಟು ಹೇಳಿ?



ಅಪ್ಪ ಮೆಲ್ಲ ಬಂದರು
ಒಂದು ಲಾಡು ತಿಂದರು
ಉಳಿಯಿತೆಷ್ಟು ಹೇಳಿ?

ಗುಂಡ ಓಡಿ ಬಂದ
ಒಂದು ಲಾಡು ತಿಂದ
ಮುಗಿದು ಹೋಯಿತಲ್ಲ
ಸೊನ್ನೆ ಉಳಿಯಿತೆಂದ


0





## ಬಣ್ಣದ ಬಳೆಗಳು

ಆಯಿಷಳಲ್ಲಿ 8 ಬಳೆಗಳಿವೆ. ಅವುಗಳನ್ನು ಎರಡು ಕೈಗಳಿಗೂ ಹಾಕಬೇಕು. ಬಲದ ಕೈಗೆ 3 ಬಳೆಗಳನ್ನು ಹಾಕಿದರೆ ಎಡದ ಕೈಗೆ ಎಷ್ಟು ಹಾಕಬಹುದು? ☐



ಆಯಿಷ ಬೇರೆ ಯಾವ ಯಾವ ರೀತಿ ಬಳೆಗಳನ್ನು ಹಾಕಿರಬಹುದು?

| | | | | | | | |
|---|---|---|---|---|---|---|---|
| ಎಡದ ಕೈಗೆ | 7 | | | | | | |
| ಬಲದ ಕೈಗೆ | 1 | | | | | | |

ಉಷಳಿಗೆ 7 ಮಿಠಾಯಿ ಸಿಕ್ಕಿತು. ಅದರಿಂದ 2 ಮಿಠಾಯಿಗಳನ್ನು ಅಂಜಲಿಗೂ 2 ಮಿಠಾಯಿಗಳನ್ನು ಮನುವಿಗೂ ಕೊಟ್ಟಳು.

ಈಗ ಉಷಳ ಕೈಯಲ್ಲಿ ಉಳಿದಿರುವ ಮಿಠಾಯಿಗಳು ಎಷ್ಟು? ☐




## ದಾರಿ ತೋರಿಸುವಿರಾ?

**ಮೊಲಕ್ಕೆ ಕ್ಯಾರೆಟ್ ತೋಟಕ್ಕೆ ಹೋಗಬೇಕು.**

**ದಾರಿ ಯಾವುದು?**

**ಕೊಟ್ಟಿರುವ ಕ್ರಿಯೆಗಳಿಗೆ ಉತ್ತರವಾಗಿ ಸಿಗದ ಸಂಖ್ಯೆ ಯಾವ ಬಾಗಿಲಿನಲ್ಲಿದೆ?**

**ಆ ಬಾಗಿಲನ್ನು ತೆರೆಯಬಹುದು.**






8 − 4 = □

6 + 3 = □

6 − 3 = □


7 + 2 = □

2 + 4 = □

5 − 3 = □

## ಗೆಳೆಯರನ್ನು ಕಂಡುಹಿಡಿಯುವ

ಕೆಳಗೆ ಕೊಟ್ಟಿರುವ ಕ್ರಿಯೆಗಳನ್ನು ಮಾಡಿರಿ. ಉತ್ತರವಾಗಿ ಸಿಗುವ ಸಂಖ್ಯೆಗಳನ್ನು ಕಂಡುಹಿಡಿದು ಅವುಗಳನ್ನು ಗೆರೆ ಎಳೆದು ಜೋಡಿಸಿರಿ.






# 5 ಹತ್ತು ಒಂದು ಹನ್ನೊಂದು

ಚಿತ್ರನೋಡಿ ಕಥೆ ಹೇಳುವ.




ಆಟದ ಮೈದಾನದಲ್ಲಿ ಎಷ್ಟು ಮಕ್ಕಳಿದ್ದಾರೆ? ☐

ಆಕಾಶದಲ್ಲಿ ಎಷ್ಟು ಹಕ್ಕಿಗಳಿವೆ? ☐

ಮಾವಿನ ಮರದಲ್ಲಿ ಎಷ್ಟು ಹಕ್ಕಿಗಳಿವೆ? ☐


ಕೊಳದಲ್ಲಿ ಎಷ್ಟು ಮೀನುಗಳಿವೆ? ☐

ಎಷ್ಟು ಮನೆಗಳಿವೆ? ☐




ನಾನು ಹತ್ತು ಮೊಟ್ಟೆ ಇಟ್ಟೆನು.

ಹತ್ತು ಮೊಟ್ಟೆಗಳು ಬಿರಿದು ಮರಿಗಳು ಹೊರಬಂದುವು.



ಹತ್ತು ಮರಿಗಳು





ಹತ್ತು ಹತ್ತು ಹತ್ತು
ಕೈಗಳಿಗೆ ಬೆರಳುಗಳು ಹತ್ತು

ಲಲಿತ ಕಂಡ ಹತ್ತುಗಳು







## ಗುಂಪು ಮಾಡುವ

ಲಲಿತ ಆಟವಾಡಲು ಕೆಲವು ಕಡ್ಡಿಗಳನ್ನು ತಂದಳು.





ಶಬಾನ ಅವುಗಳನ್ನು ಸೇರಿಸಿ ಒಂದು ಕಟ್ಟು ಮಾಡಿದಳು

ಮಂಜಟ್ಟಿ ಕಾಯಿ, ಕಡ್ಡಿ, ಗೋಲಿಕಾಯಿ, ಹೂ ಮೊದಲಾದವುಗಳನ್ನು ಸಂಗ್ರಹಿಸಿ ಹತ್ತರ ಗುಂಪುಗಳಾಗಿ ಮಾಡಿರಿ.





## ಪೆಪ್ಪರ ಮಿಂಟು

ಪೆಪ್ಪರ ಮಿಂಟು ಪೆಪ್ಪರ ಮಿಂಟು
ರುಚಿ ರುಚಿಯಾದ ಪೆಪ್ಪರ ಮಿಂಟು
ಅಪ್ಪನು ತಂದ ಪೆಪ್ಪರ ಮಿಂಟು
ಪೆಪ್ಪರ ಮಿಂಟು ತಿಂದೆನು ಎಂಟು

ಮಾವ ಮಿಠಾಯಿ ತಂದರು.



ಲಲಿತ ಪೊಟ್ಟಣ ಬಿಚ್ಚಿದಳು. ಎಣಿಸಿ ನೋಡಿದಳು. ಹತ್ತು ಮಿಠಾಯಿಗಳು








## ಮಂಜಟ್ಟಿಕಾಯಿ ಆಟ

ಮಕ್ಕಳು ಮಂಜಟ್ಟಿಕಾಯಿ ಆಟ ಆಡತೊಡಗಿದರು. ಲಲಿತ ಹತ್ತಕ್ಕಿಂತ ಕಡಿಮೆ ಸಂಖ್ಯೆಯ ಮಂಜಟ್ಟಿ ಕಾಯಿಗಳನ್ನು ಕೋಣೆಯಲ್ಲಿ ಹಾಕಿದಳು. ಕೋಣೆಯಲ್ಲಿ ಹತ್ತು ಆಗಬೇಕಾದರೆ ಎಷ್ಟು ಮಂಜಟ್ಟಿ ಕಾಯಿಗಳನ್ನು ಶಬಾನ ಹಾಕಬೇಕು? ಅವರಿಗೆ ಸಿಕ್ಕಿದ ಸಂಖ್ಯೆಯನ್ನು ಬರೆಯಿರಿ.

| ಲಲಿತ | | ಶಬಾನ | | |
|---|---|---|---|---|
| 6 | + | | = | 10 |
| | + | 7 | = | 10 |
| | + | | = | 10 |
| | + | | = | 10 |
| | + | | = | 10 |


## ಎಷ್ಟು ಪೆನ್ಸಿಲುಗಳು

ಲಲಿತನ ಅಜ್ಜ ಅವಳಿಗೆ ಬಣ್ಣದ ಪೆನ್ಸಿಲಿನ ಒಂದು ಪ್ಯಾಕೆಟನ್ನು ಉಡುಗೊರೆಯಾಗಿ ನೀಡಿದರು. ಅವಳ ಕೈಯಲ್ಲಿ ಮೊದಲು ಎರಡು ಬಣ್ಣದ ಪೆನ್ಸಿಲುಗಳಿದ್ದುವು.




ಹನ್ನೆರಡನ್ನು ಹೀಗೆ ಬರೆಯಬಹುದು 12


## ಎಣಿಸುವ




ಹತ್ತು ನಾಲ್ಕು ಹದಿನಾಲ್ಕು

10 + 4 = 14


## ಬಿಟ್ಟುಹೋದ ಸಂಖ್ಯೆಗಳನ್ನು ತುಂಬಿಸಿರಿ.



| ಹತ್ತು | | ಮೂರು | | ಹದಿಮೂರು |
|---|---|---|---|---|
| 10 | + | ☐ | = | 13 |




| ಹತ್ತು | | ಐದು | | ಹದಿನೈದು |
|---|---|---|---|---|
| ☐ | + | ☐ | = | ☐ |



ಹತ್ತು ಆರು ಹದಿನಾರು

☐ + ☐ = 16



ಹತ್ತು ಏಳು ಹದಿನೇಳು


☐ + ☐ = 17





| ಹತ್ತು | | ಒಂಬತ್ತು | | ಹತ್ತೊಂಬತ್ತು |
| --- | --- | --- | --- | --- |
| | + | | = | 19 |





| ಹತ್ತು | | ಎಂಟು | | ಹದಿನೆಂಟು |
| --- | --- | --- | --- | --- |
| | + | | = | |









| ಹತ್ತು | | ಒಂದು | | ಹನ್ನೊಂದು |
| --- | --- | --- | --- | --- |
| | + | | = | 11 |




ರೈಲುಗಾಡಿಗಳ ಬೋಗಿಗಳಲ್ಲಿ ಸಂಖ್ಯೆಗಳನ್ನು ಕ್ರಮವಾಗಿ ಬರೆಯಿರಿ.





ಚಿತ್ರದಲ್ಲಿ ಕೊಟ್ಟಿರುವ ಬೊಟ್ಟುಗಳನ್ನು ಎಣಿಸಿ ಸಂಖ್ಯೆಗಳೊಂದಿಗೆ ಜೋಡಿಸಿರಿ



## ಎಷ್ಟು ಮುತ್ತುಗಳು

ಲಲಿತ ಮುತ್ತಿನ ಮಾಲೆ ಮಾಡಲು ಮುತ್ತುಗಳನ್ನು ತಂದಳು.


ಎಣಿಸಿ ಬರೆಯುವ





ಕ್ರಮವಾಗಿ ಗೆರೆ ಎಳೆದು ಸಂಖ್ಯೆಗಳನ್ನು ಜೋಡಿಸಿ ಚಿತ್ರ ಪೂರ್ತಿಗೊಳಿಸಿರಿ.




ಬಿಟ್ಟ ಸಂಖ್ಯೆಗಳನ್ನು ಬರೆದು ಪೂರ್ತಿಗೊಳಿಸಿರಿ.




ಕಾರ್ಡುಗಳಲ್ಲಿರುವ ಸಂಖ್ಯೆಗಳನ್ನು ಕ್ರಮವಾಗಿ ಕೋಣೆಗಳಲ್ಲಿ ಬರೆಯಿರಿ.




| | | | | | | | |
|---|---|---|---|---|---|---|---|
| | | | | | | | |

